

(6ನೇ ಪುಟದಿಂದ)

ಚಳಿಗಾಲದಲ್ಲಿ ಅಲ್ಪ ಸ್ವಲ್ಪ ಮಳೆ ಬಿದ್ದರಂತೂ ಕ್ಯಾಮರಾ ಕಣ್ಣುಗಳಿಗೆ ಬಿಡುವೇ ಇರುವುದಿಲ್ಲ. ಮುಂಜಾನೆಯ ಸೂರ್ಯೋದಯದ ಕಿರಣಗಳು ಚಳಿಗಾಲದ ಇಬ್ಬನಿಗಳೊಂದಿಗೆ ಚೆಲ್ಲಾಟವಾಡುತ್ತಾ, ಗಿಡ ಮರಗಳ ನಡುವೆ ಸೂಸುವ ನೆರಳು ಬೆಳಕಿನ ಸಂಯೋಜನೆ ಹೊಸ ಲೋಕವನ್ನೇ ಸೃಷ್ಟಿಸುತ್ತದೆ. ಗಿಡಮರಗಳ ಸಂದಿಗೊಂದುಗಳಲ್ಲಿ ಇಣುಕುವ ಸೂರ್ಯನ ಕಿರಣಗಳು ಸೃಷ್ಟಿಸುವ ವಿನ್ಯಾಸಗಳಂತೂ ಅದ್ಭುತ.

ಒಂದೇ ಹಸಿರು ಬಣ್ಣ ಈ ಸಂದರ್ಭಗಳಲ್ಲಿ ಬೆಳಕಿನ ಆಯಾಮಕ್ಕೆ ತಕ್ಕಂತೆ ವಿಭಿನ್ನವಾಗಿ ಕಾಣಿಸುವುದೂ ಮೋಹಕವೇ. ಹಸಿರಲ್ಲೂ ಎಷ್ಟೊಂದು ಹಸಿರುಗಳಿವೆ! ನೆಲದ ಮೇಲಿನ ಹಸಿರೇ ಬೇರೆ; ಮರದ ಮೇಲಿನ ಹಸಿರೇ ಬೇರೆ. ಅದರಲ್ಲೂ ನೆರಳಿನಲ್ಲಿ ಕಾಣಿಸುವ ಹಸಿರು ಇನ್ನಷ್ಟು ವಿಭಿನ್ನ. ಮಧ್ಯಾಹ್ನದ ನೇರ ಬಿಸಿಲು ಮರವೊಂದರ ಮೇಲೆ







ವಿನ್ಯಾಸ: ದಿಲ್

ಬಿದ್ದಾಗ ಕಾಣುವ ಹಸಿರಿಗೂ, ಇಳಿಸಂಜೆಯ ಹಣ್ಣು ಬಿಸಿಲು ಅದೇ ಮರದ ಮೇಲೆ ಬಿದ್ದಾಗ ಕಾಣುವ ಹಸಿರಿಗೂ ಅಜಗಜಾಂತರ ವ್ಯತ್ಯಾಸವಿರುತ್ತದೆ. ಇನ್ನು ಹಣ್ಣೆಲೆಗಳು ಹಸಿರೆಲೆಗಳೊಂದಿಗೆ ಸೇರಿದಾಗ ಉಂಟು ಮಾಡುವ ವರ್ಣವೈವಿಧ್ಯವನ್ನು ಬಣ್ಣಿಸುವುದು ಕಷ್ಟ. ಸುಮ್ಮನೇ ಫೋಟೋ ಕ್ಲಿಕ್ಕಿಸಿ ಮನದಣಿಯೆ ಆಸ್ವಾದಿಸಬೇಕು, ಅಷ್ಟೆ!

ಸಂಜೆಯ ಹೊಂಬಣ್ಣದಲ್ಲಿ ಕುರಿಗಳ ಹಿಂಡು ತಮ್ಮ ಗೂಡು ಸೇರಿಕೊಳ್ಳುವ ಆತುರದಿಂದ ಸಾಗುವಾಗ, ಬೆಳಕಿನ ಪತ್ತಲಕೆ ಕತ್ತಲ ಕಸೂತಿ ಹಾಕಿದಂತೆ. ನೆರಳು –ಬೆಳಕಿನ ಮಿಳಿತದ ಸೆಳೆತ ಎಂದೆಂದಿಗೂ ಮೋಹಕ.

ಮುಸ್ಸಂಜೆಯ ಬೆಳಕು ಕ್ರಮೇಣ ಸರಿದಂತೆ ಸುಂದರ ದೃಶ್ಯಗಳೂ ನಿಸ್ಸಾರವಾಗತೊಡಗುತ್ತವೆ. ವಿಷಾದ ಸೂಸುವ ಕಪ್ಪು ಕವಿಯುತ್ತದೆ. ಅರೆ! ಕೆಲವೇ ನಿಮಿಷಗಳ ಮುಂಚೆ ನೆರಳು ಬೆಳಕಿನ ಚೆನ್ನಾಟದಲ್ಲಿ ಮನಮೋಹಕ ದೃಶ್ಯ ಸೃಷ್ಟಿಸಿದ ಆ ಜಾಗ ಇದೇನಾ... ಎಂಬ ಅನುಮಾನ ಮೂಡುತ್ತದೆ.